# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ಹೇರೋಹಳ್ಳಿ ಉಪ-ವಿಭಾಗದ,
ವಾರ್ಡ್ ನಂ.40, ದೊಡ್ಡಬಿದರಕಲ್ಲು, ಕರಿಹೋಬನಹಳ್ಳಿ, ಬೆಂಗಳೂರು-5600 58.

---

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾ.ರಾ.ನಗರ ವಲಯ, ಹೇರೋಹಳ್ಳಿ ಉಪ-ವಿಭಾಗದ ವಾರ್ಡ್ ನಂ.40ರಲ್ಲಿ ದಿನಾಂಕ: 05.01.2021 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.**

1. ಡಾ॥ ಶ್ರೀಮತಿ ಕೃತಿಕಾ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಜಿ.ನಾಗಭೂಷಣ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
3. ಶ್ರೀ ಡಿ.ಎಂ.ರಮೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು.
4. ಶ್ರೀ ಮುತ್ತೇಗೌಡ, ಕಿರಿಯ ಆರೋಗ್ಯ ಪರಿವೀಕ್ಷಕರು.
5. ಶ್ರೀ ವೆಂಕಟಪ್ಪ.ಡಿ, ಕಂದಾಯ ಮೌಲ್ಯಮಾಪಕರು.
6. ಶ್ರೀ ಮಂಜುನಾಥ್. ಕೆ.ಎಲ್, ಕಂದಾಯ ಪರಿವೀಕ್ಷಕರು.
7. ಶ್ರೀ ಹೆಚ್.ಡಿ.ವೆಂಕಟೇಶ್, ತೋಟಗಾರಿಕೆ ನಿರೀಕ್ಷಕರು, ತೋಟಗಾರಿಕೆ ಇಲಾಖೆ.
8. ಶ್ರೀ ಆಂಜನಪ್ಪ, ಕಂದಾಯ ಪರಿವೀಕ್ಷಕರು.
9. ಶ್ರೀ ಸಂತೋಷ್ ಕುಮಾರ್, ತೆರಿಗೆ ಪರಿವೀಕ್ಷಕರು.
10. ಶ್ರೀ ಆನಂದ್, ಸ.ಕಾ.ಅ, ಬಿ.ಡಬ್ಲ್ಯೂ.ಎಸ್.ಎಸ್.ಬಿ.
11. ಶ್ರೀಮತಿ ಉಶಾ ಕಿರಣಕುಮಾರ್, ಕಂದಾಯ ಪರಿವೀಕ್ಷಕರು.
12. SWM Plant ಮೇಲ್ವಿಚಾರಕರು.

**ಈ ಕೆಳಕಂಡ ಅಧಿಕಾರಿಗಳು ಸಭೆಯಲ್ಲಿ ಗೈರು ಹಾಜರಾಗಿರುತ್ತಾರೆ.**

1. ಶ್ರೀ ರಮೇಶ್, ಪಶು ವೈದ್ಯರು.
2. ಶ್ರೀ ಎಂ.ಅಮರನಾಥ್, ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ.
3. ಶ್ರೀ ಜಿ.ಗೋವಿಂದರಾಜು, ಅರಣ್ಯ ಇಲಾಖೆ,
4. ಮೇಘನಾ.ಬಿ.ಕೆ, ಸಹಾಯಕ ಅಭಿಯಂತರರು, ಕೆರೆಗಳ ವಿಭಾಗ, ರಾ.ರಾ.ನಗರ.ವಲಯ.
5. ಸಮಾಜ ಕಲ್ಯಾಣ ಇಲಾಖೆ ಅಧಿಕಾಗಳು.
6. ಪೋಲೀಸ್ ಇನ್‌ಸ್ಪೆಕ್ಟರ್, ಬ್ಯಾಡರಹಳ್ಳಿ ಪೋಲೀಸ್ ಠಾಣೆ.
7. ಪೋಲೀಸ್ ಇನ್‌ಸ್ಪೆಕ್ಟರ್, ಪೀಣ್ಯ ಪೋಲೀಸ್ ಠಾಣೆ.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**1) ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸಿದ ವಿಚಾರ.**

1. ವಾರ್ಡ ವ್ಯಾಪ್ತಿಯಲ್ಲಿ ಕೆಲವು ಕಡೆ ಕಸವನ್ನು ಸಂಗ್ರಹಿಸಿ ಬೆಂಕಿ ಹಾಕುತ್ತಿರುವುದು ಕಂಡುಬಂದಿದ್ದು, ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸದಸ್ಯರು
2. ರಸ್ತೆ ಬದಿ ಯಲ್ಲಿ ಕಸ ಹಾಕುವುದನ್ನು ತಡೆಯಲು ಕಸದ ಪಾಯಿಂಟ್‌ಗಳಲ್ಲಿ ಕಸ ಹಾಕಿದವರ ಮೇಲೆ ದಂಡವನ್ನು ವಿಧಿಸುತ್ತಿರುವುದಾಗಿ ತಿಳಿಸಿದರು
3. ವಾರ್ಡ ವ್ಯಾಪ್ತಿಯಲ್ಲಿನ ಕೈಗಾರಿಕಾ ಪ್ರದೇಶದ ರಸ್ತೆಗಳ ಬದಿಯಲ್ಲಿ ಕಸದ ರಾಶಿ ಬೀಳುತ್ತಿರುವುದು ಕಂಡುಬಂದಿದ್ದು, ಅದರ ಸರಿಯಾದ ನಿರ್ವಹಣೆ ಮಾಡುವಂತೆ ಸದಸ್ಯರು ಸೂಚಿಸಿದರು.
4. ಸಣ್ಣ ಮತ್ತು ಅತಿಸಣ್ಣ ಕೈಗಾರೆಕೆಗಳ ಮಾಲೀಕರ ಸಭೆ ಕರೆದು ಕಸ ನಿರ್ವಹಣೆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸದಸ್ಯರು ಸೂಚಿಸಿದರು.

2) **ವಾರ್ಡ್ ವ್ಯಾಪ್ತಿಯಲ್ಲಿನ ಕೋವಿಡ್ ನಿಯಂತ್ರಣ ಬಗ್ಗೆ ಚರ್ಚಿಸಲಾದ ವಿಚಾರಗಳು.**

1. ವಾರ್ಡ್ ವ್ಯಾಪ್ತಿಯಲ್ಲಿ ದಿನಾಂಕ: 04.01.2021 ರವರೆಗೆ 1841 ಕೋವಿಡ್ ಕೇಸ್‌ಗಳಿದ್ದು, ಅದರಲ್ಲಿ 1780 ಜನ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದು, 16 ಜನರಿಗೆ ಕೋವಿಡ್ ಪಾಸಿಟಿವ್ ಇದ್ದು, ಮತ್ತು 45 ಜನರು ಮರಣ ಹೊಂದಿರುತ್ತಾರೆ ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿದರು.
2. ಕೋವಿಡ್ ವ್ಯಾಕ್ಸಿನ್‌ಗಳನ್ನು ಒಂದು ದಿನಕ್ಕೆ 100 ಜನರಿಗೆ ಪೂರೈಕೆ ಮಾಡಲಾಗುವುದು ಎಂದು ತಿಳಿಸಿದರು.
3. ವಾರ್ಡ್ ವ್ಯಾಪ್ತಿಯಲ್ಲಿ ಮಾಸ್ಕ್ ಧರಿಸದೆ ಓಡಾಡುವ ಜನರಿಗೆ ಮಾರ್ಷಲ್‌ಗಳ ಮತ್ತು ಪೋಲೀಸರ ಸಹಾಯದೊಂದಿಗೆ ದಂಡವನ್ನು ವಿಧಿಸುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.
4. ಕೋವಿಡ್ ವ್ಯಾಕ್ಸಿನ್‌ಗಳನ್ನು ಮೊದಲಿಗೆ ಕೊರೋನಾ ವಾರಿಯರ್ಸ್‌ಗಳಿಗೆ ನೀಡುವುದಾಗಿ ತಿಳಿಸಿದರು.
5. ಜನವರಿ 17 ರಂದು ಪಲ್ಸ್ ಪೋಲಿಯೋ ಕಾರ್ಯಕ್ರಮ ಇರುವುದಾಗಿ ಹಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು.
6. ವಾರ್ಡ್ ವ್ಯಾಪ್ತಿಯಲ್ಲಿನ ಎಲ್ಲಾ ಕಲ್ಯಾಣ ಮಂಟಪಗಳ ಮಾಲೀಕರಿಗೆ ಕೋವಿಡ್ ನಿಯಮಗಳ ಬಗ್ಗೆ ಅರಿವು ಮೂಡಿಸಲು ಮುಂಜಾಗ್ರತಾ ಕ್ರಮವಾಗಿ ಈಗಾಗಲೆ ಎಚ್ಚರಿಕೆ ನೀಡಿರುವುದಾಗಿ ತಿಳಿಸಿದರು.

3) **ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ ಚರ್ಚಿಸಲಾದ ವಿಚಾರ.**

1. ವಾರ್ಡ್ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆಗಳ ಗುಂಡಿಗಳನ್ನು ಮುಚ್ಚಲು ಈಗಾಗಲೇ 50 ಕೋಟಿ ಅನುಧಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ವಾರ್ಡ್ ಕಮಿಟಿ ವತಿಯಿಂದ ಮೇಲಧಿಕಾರಿಗಳು ಹಾಗೂ ಮಾನ್ಯ ಜನಪ್ರತಿನಿಧಿಗಳನ್ನು ಭೇಟಿ ಮಾಡಿ ಸದರಿ ಕಾಮಗಾರಿಯ ಅವಶ್ಯಕತೆಯ ಬಗ್ಗೆ ತಿಳಿಸುವಂತೆ ಸದಸ್ಯರು ಸೂಚಿಸಿದರು.
2. ವಾರ್ಡ ವ್ಯಾಪ್ತಿಯಲ್ಲಿನ ರಸ್ತೆ ಬದಿ ಚರಂಡಿಗಳಲ್ಲಿ ಹೂಳು ತುಂಬಿರುವುದು ಕಂಡುಬಂದಿದ್ದು, ಅದನ್ನು ಎತ್ತಿಸುವಂತೆ ಸದಸ್ಯರು ಸೂಚಿಸಿದರು.
3. ದೊಡ್ಡಬಿದರಕಲ್ಲು ಕೆರೆ ಹತ್ತಿರ ಮನೆ ನಿರ್ಮಿಸಿಕೊಂಡವರಿಗೆ ತೆರವುಗೊಳಿಸುವಂತೆ ನೋಟೀಸ್ ನೀಡಿದ್ದು, ಆದರೆ ಅಲ್ಲಿ ವಾಸಿಸುತ್ತಿರುವವರು ಕಡು ಬಡವರಾಗಿದ್ದು, ಸುಮಾರು 30 ವರ್ಷಗಳಿಂದ ಅಲ್ಲಿಯೇ ಗುಡಿಸಲು ಹಾಕಿಕೊಂಡು ವಾಸಿಸುತ್ತಿರುತ್ತಾರೆ. ಮತ್ತು ವಿದ್ಯುತ್ ಸಂಪರ್ಕ ಹಾಗೂ ಕಾಂಕ್ರೀಟ್ ರಸ್ತೆಯ ಸೌಲಭ್ಯವನ್ನು ಸಹ ಪಡೆದಿರುತ್ತಾರೆ. ಅಲ್ಲದೇ ಕೇವಲ 4-5 ಅಡಿಗಳಷ್ಟು ಮಾತ್ರ ಒತ್ತುವರಿ ಆಗಿರುತ್ತದೆ. ಆದ್ದರಿಂದ ಯಾವುದೇ ಬಡವರ ಮನೆಗಳ ತೆರವು ಕಾರ್ಯ ಮಾಡದಂತೆ ಸಂಭಂದಪಟ್ಟ ಕೆರೆಗಳ ವಿಭಾಗದ ಅಭಿಯಂತರಿಗೆ ತಿಳಿಸುವಂತೆ ಸದಸ್ಯರು ಮನವಿ ಮಾಡಿದರು.

4) **ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾಮಗಾರಿಗಳಾದ ಕುಡಿಯುವ ನೀರು ಮತ್ತು ಒಳಚರಂಡಿಯ ಬಗ್ಗೆ ಚರ್ಚಿಸುವ ವಿಚಾರ.**

1. ವಾಲ್ಮೀಕಿ ನಗರ, 10ನೇ ಅಡ್ಡರಸ್ತೆಯಲ್ಲಿ ಎಲ್&ಟಿ ರವರು ದೊಡ್ಡ ದೊಡ್ಡ ಕಲ್ಲುಗಳನ್ನು ಅಲ್ಲಿಯೇ ಬಿಟ್ಟಿದ್ದು ಅವುಗಳನ್ನು ಕೂಡಲೇ ತೆರವುಗೊಳಿಸಬೇಕೆಂದು ಸದಸ್ಯರು ಸೂಚಿಸಿದರು.
2. ದೊಡ್ಡಬಿದರಕಲ್ಲು ವೇಣುಗೋಪಾಲ ಸ್ವಾಮಿ ದೇವಸ್ಥಾನದ ಹತ್ತಿರ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕೆಂದು ಸದಸ್ಯರು ಸೂಚಿಸಿದರು.
3. ಮಾರುತಿ ಬಡಾವಣೆ ಎಲ್&ಟಿ ಒಳಚರಂಡಿ ಕಾಮಾಗಾರಿಯು ಅಪೂರ್ಣವಾಗಿದ್ದು, ಶೀಘ್ರವಾಗಿ ಪೂರ್ಣಗೊಳಿಸುವಂತೆ ಸದಸ್ಯರು ಸೂಚಿಸಿದರು.
4. ರಾಜಕುಮಾರ್ ಬಾರ್ ಹತ್ತಿರ ಸಾನಿಟರಿ ಬ್ಲಾಕ್ ಆಗಿದ್ದು ಅತಿ ಶೀಘ್ರವಾಗಿ ಹೊಸ ಒಳ ಚರಂಡಿಗೆ ಸಂಪರ್ಕ ನೀಡಬೇಕೆಂದು ಸದಸ್ಯರು ಎಲ್&ಟಿ ರವರಿಗೆ ಸೂಚಿಸಿದರು.

5) **ವಾರ್ಡ್ ವ್ಯಾಪ್ತಿಯಲ್ಲಿನ ಬೆಸ್ಕಾಂ ಇಲಾಖೆಯ ಬಗ್ಗೆ ಚರ್ಚಿಸಿದ ವಿಚಾರಗಳು.**

1. ಮೈಸೂರು ಲ್ಯಾಂಪ್ಸ್ ಲೇಔಟ್ ನಲ್ಲಿ ಕಂಬ ಮುರಿದಿದ್ದು ಈ ಕೂಡಲೇ ಸರಿಪಡಿಸಬೇಕೆಂದು ಸೂಚಿಸಿದರು.
2. ಬಾಲಾಜಿನಗರದಲ್ಲಿ ಅತಿಯಾದ ವಿದ್ಯುತ್ ಹರಿವಿನಿಂದ ಪಂಪ್‌ಸೆ ಸುಟ್ಟುಹೋಗಿದೆ ಎಂದು ಸದಸ್ಯರು ಸೂಚಿಸಿದರು.

6) **ವಾರ್ಡ್ ವ್ಯಾಪ್ತಿಯಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಚರ್ಚಿಸಲಾದ ವಿಚಾರ**

1. ಹೊಸಹಳ್ಳಿ ಸರ್ವೆ ನಂ 2 ರಲ್ಲಿ ಸ್ಮಶಾನಕ್ಕಾಗಿ ಜಾಗದ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳುವಂತೆ ಸದಸ್ಯರು ಶ್ರೀ ಆಂಜನಪ್ಪ, ಕಂದಾಯ ಪರಿವೀಕ್ಷಕರಿಗೆ ಸೂಚಿಸಿದರು.
2. ದೊಡ್ಡಬಿದರಕಲ್ಲು ಗ್ರಾಮದ ಸರ್ವೆ ನಂ 64 ರಲ್ಲಿ ಕರಕುಶಲ ಅಭಿವೃದ್ಧಿ ನಿಗಮಕ್ಕೆ 16 ಎಕರೆ ಸ್ಥಳವನ್ನು ಕೊಟ್ಟಿದ್ದು, ಅಲ್ಲಿ ಯಾವುದೇ ಅಭಿವೃದ್ಧಿ ಕೆಲಸ ನಡೆಯದೆ ಇರವುದರಿಂದ, ಈ ಜಮೀನಿನಲ್ಲಿ 2 ಎಕರೆ ಜಾಗವನ್ನು ಸರ್ಕಾರಿ ಪ್ರೌಢ ಶಾಲೆ ಮತ್ತು ಕಾಲೇಜ್ ನಿರ್ಮಿಸಲು ಮಂಜೂರು ಮಾಡಿ ಕೊಡುವಂತೆ ಘನ ಸರ್ಕಾರಕ್ಕೆ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಮತ್ತು ಮಾನ್ಯ ಯಶವಂತಪುರ ವಿಧಾನಸಭಾ ಕ್ಷೇತ್ರದ ಶಾಸಕರು ಮತ್ತು ಸಹಕಾರ ಸಚಿವರು, ಕರ್ನಾಟಕ ಸರ್ಕಾರ ಇವರಿಗೆ ಪತ್ರವನ್ನು

ಬರೆದು, ಈ ಭಾಗದಲ್ಲಿ ಯಾವುದೇ ಸರ್ಕಾರಿ ಪ್ರೌಢ ಶಾಲೆ ಮತ್ತು ಕಾಲೇಜ್ ಇಲ್ಲದಿರುವುದರಿಂದ ಮಂಜೂರು ಮಾಡಿಕೊಡುವಂತೆ ಕೋರಲು ತೀರ್ಮಾನಿಸಲಾಯಿತು. ಈ ಬಗ್ಗೆ ಮಾನ್ಯ ಜಂಟಿ ಆಯುಕ್ತರು ರವರ ಮುಖಾಂತರ ಘನ ಸರ್ಕಾರಕ್ಕೆ, ಜಿಲ್ಲಾಧಿಕಾರಿಗಳಿಗೆ & ಮಾನ್ಯ ಸಚಿವರಿಗೆ ಪತ್ರ ಬರೆಯಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

3. ಕರಿಓಬನಹಳ್ಳಿ ಸರ್ವೆ ನಂ 110 ರಲ್ಲಿ ಸರ್ವೆ ಮಾಡಲು ಸರ್ವೆ ಇಲಾಖೆಗೆ ಪತ್ರ ಬರೆದಿರುವುದಾಗಿ ತಿಳಿಸಿದರು.

**7) ವಾರ್ಡ್ ವ್ಯಾಪ್ತಿಯಲ್ಲಿ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಚರ್ಚಿಸಲಾದ ವಿಚಾರ**

1. ವಾರ್ಡ ವ್ಯಾಪ್ತಿಯಲ್ಲಿ ಒಟ್ಟು ನಾಲ್ಕು ಉದ್ಯಾನವನಗಳು ತಮ್ಮ ವ್ಯಾಪ್ತಿಗೆ ಬರುವುದಾಗಿ ತೋಟಗಾರಿಕಾ ನಿರೀಕ್ಷಕರು ತಿಳಿಸಿದರು.
2. ನಗರ ಪ್ರದೇಶಗಳಲ್ಲಿ ಉದ್ಯಾನವನಗಳಿಗೆ ಎಷ್ಟು ಅನುದಾನ ಬರುತ್ತದೆ ಹಾಗೂ ಕೆಲಸಗಾರರಿಗೆ ಎಷ್ಟು ಸಂಬಳ ನೀಡುತ್ತಾರೆ, ಮತ್ತು ಇನ್ನುಳಿದ ಯಾವ ಯಾವ ಸೌಲಭ್ಯ ನೀಡುತ್ತಿದ್ದಾರೆ, ಅದರಂತೆ ನಮ್ಮ ವಾರ್ಡ ವ್ಯಾಪ್ತಿಯಲ್ಲಿಯೂ ಸಹ ಪ್ರಸ್ತಾವನೆ ಸಲ್ಲಿಸುವಂತೆ ಸದಸ್ಯರು ತೋಟಗಾರಿಕಾ ನಿರೀಕ್ಷಕರಿಗೆ ತಿಳಿಸಿದರು.
3. ಡಿ ಗ್ರೂಫ್ ಬಡಾವಣೆಯ ಉದ್ಯಾನವನದ ಪಾದಾಚಾರಿ ರಸ್ತೆಯಲ್ಲಿ ನೀರು ನಿಂತುಕೊಳ್ಳುತ್ತಿದ್ದು, ಅದರಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಈ ಕೂಡಲೇ ಸರಿಪಡಿಸಬೇಕೆಂದು ಸದಸ್ಯರು ಸೂಚಿಸಿದರು.

**8) ವಾರ್ಡ್ ವ್ಯಾಪ್ತಿಯಲ್ಲಿ SWM Plant ಗೆ ಸಂಬಂಧಿಸಿದಂತೆ ಚರ್ಚಿಸಲಾದ ವಿಚಾರ**

1. ಸದರಿ ಪ್ಲಾಂಟ್ ಗೆ ಪ್ರತಿದಿನ ಸುಮಾರು 140 ಟನ್‌ಗಳಷ್ಟು ಹಸಿ ಕಸ ಬರುತ್ತದೆ ಎಂದು ಪ್ಲಾಂಟ್ ನ ಮೇಲ್ವಿಚಾರಕರು ತಿಳಿಸಿದರು.
2. ಪ್ಲಾಂಟ್‌ನಲ್ಲಿ ಉತ್ಪಾದನೆ ಆಗುವ 13mm, 16mm ಮತ್ತು ಹೆಚ್ಚಿನ ಗಾತ್ರದ ಗೊಬ್ಬರವನ್ನು ಉಚಿತವಾಗಿ ರೈತರಿಗೆ ನೀಡುತ್ತಿರುವುದಾಗಿ ತಿಳಿಸಿದರು.

**9) ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಲಾದ ಇತರ ವಿಚಾರಗಳು.**

1. ಮಳೆನೀರುಗಾಲುವೆ ಅಭಿಯಂತರರು ಕಾಮಗಾರಿ ನಿಲ್ಲಿಸಿದ್ದು, ಕಾರಣ ತಿಳಿಸುವಂತೆ ಸದಸ್ಯರು ಸೂಚಿಸಿದರು.
2. ಗರಿಷ್ಠ ಮೂರಕ್ಕಿಂತ ಹೆಚ್ಚು ಸಭೆಗೆ ಗೈರಾದ ಅಧಿಕಾರಿಗಳಿಗೆ ಶೋಕಾಸ್ ನೋಟೀಸ್ ನೀಡಬೇಕೆಂದು ನೋಡಲ್ ಅಧಿಕಾರಿಗಳು ತಿಳಿಸಿದರು.
3. ವಾರ್ಡ ಕಮಿಟಿಯ ಪತ್ರವ್ಯವಹಾರಕ್ಕಾಗಿ ಒಬ್ಬರನ್ನು ನಿಯೋಜಿಸುವಂತೆ ಎ.ಆರ್.ಒ ರವರಿಗೆ ಪತ್ರ ಬರೆಯುವಂತೆ ಸೂಚಿಸಿದರು.

**ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.**

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.40, ದೊಡ್ಡಬಿದರಕಲ್ಲು

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ.40, ದೊಡ್ಡಬಿದರಕಲ್ಲು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-

ವಾರ್ಡ್ ಸಮಿತಿ ಅಧ್ಯಕ್ಷರ ಮತ್ತು ಸದಸ್ಯರುಗಳ ಮಾಹಿತಿಗಾಗಿ.

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ರವರ ಮಾಹಿತಿಗಾಗಿ ಕಳುಹಿಸಿದೆ.

1. ಡಾ|| ಶ್ರೀಮತಿ ಕೃತಿಕಾ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ರವರ ಮಾಹಿತಿಗಾಗಿ ಕಳುಹಿಸಿದೆ.
2. ಶ್ರೀ.ಕೂರ್ಲಪ್ಪ, ತಿಗಳರಪಾಳ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
3. ಶ್ರೀ.ಸತೀಶ್, ಜಿ.ಹೊಸಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
4. ಶ್ರೀ.ಮಂಜುನಾಥ್, ಚನ್ನನಾಯಕನಪಾಳ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
5. ಶ್ರೀ.ಮುನಿನಾರಾಯಣಪ್ಪ, ಇಂದಿರಾನಗರ ರವರ ಮಾಹಿತಿಗಾಗಿ ಕಳುಹಿಸಿದೆ.
6. ಶ್ರೀ.ನಟರಾಜ್, ವಿದ್ಯಾಮಾನ್ಯ ನಗರ ವೆಸ್ಟ್ ರವರ ಮಾಹಿತಿಗಾಗಿ ಕಳುಹಿಸಿದೆ.
7. ಶ್ರೀ.ಗರುಡಪ್ಪ, ತಿಳಗರಪಾಳ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
8. ಶ್ರೀ.ಮಾಲಾತೇಶ್, ದೊಡ್ಡಬಿದರಕಲ್ಲು ರವರ ಮಾಹಿತಿಗಾಗಿ ಕಳುಹಿಸಿದೆ.
9. ಶ್ರೀಮತಿ.ಮಂಗಳಮ್ಮ, ಮಾರಣ್ಣ ಲೇಔಟ್, ರವರ ಮಾಹಿತಿಗಾಗಿ ಕಳುಹಿಸಿದೆ.

10. ಶ್ರೀಮತಿ.ಸುಮಿತ್ರ, ಅಂದ್ರಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
11. ಶ್ರೀಮತಿ.ಪುಟ್ಟಮ್ಮ, ತಿಗಳರಪಾಳ್ಯ ರವರ ಮಾಹಿತಿಗಾಗಿ ಕಳುಹಿಸಿದೆ.

**ಅಧಿಕಾರಿಗಳ ಮಾಹಿತಿಗಾಗಿ**

1. ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ. ರವರ ಆಪ್ತಶಾಖೆಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಮಂಡಿಸಿದೆ.
3. ಮುಖ್ಯ ಅಭಿಯಂತರರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಮಂಡಿಸಿದೆ.
4. ಉಪ ನಿಯಂತ್ರಕರು (ಹಣಕಾಸು), ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಕೆಂ.ಬಿ ರವರ ಮಾಹಿತಿಗಾಗಿ ಕಳುಹಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೇ.ಬಿ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ ರವರ ಮಾಹಿತಿಗಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರ ಮಾಹಿತಿಗಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ರವರ ಮಾಹಿತಿಗಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನೆ ರವರ ಮಾಹಿತಿಗಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರ ಮಾಹಿತಿಗಾಗಿ ಕಳುಹಿಸಿದೆ.
13. ವಲಯ ಅರಣ್ಯಾಧಿಕಾರಿಗಳು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆಗಳು ವಿಭಾಗ ರವರ ಮಾಹಿತಿಗಾಗಿ ಕಳುಹಿಸಿದೆ.
15. ತೋಟಗಾರಿಕೆ ಅಧೀಕ್ಷಕರು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
16. ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.40, ದೊಡ್ಡಬಿದರಕಲ್ಲು ರವರ ಮಾಹಿತಿಗಾಗಿ ಕಳುಹಿಸಿದೆ.
17. ಪೋಲೀಸ್ ಇನ್‌ಸ್ಪೆಕ್ಟರ್, ಪೀಣ್ಯ/ಬ್ಯಾಡರಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.